1	2	3	4
11	ಈಶ್ವರಮ್ಮ	ಲಕ್ಷ್ಮಣ್ಣ	ಹೊನ್ನಂಪಲ್ಲಿ
12	ಹೆಚ್.ವಿ. ವೆಂಕಟಸ್ವಾಮಿ	ಅಶ್ವಥಮ್ಮ	ಹೊಸಹುಡ್ಯ
13	ಹೆಚ್. ನಾಗರಾಜು	ರಾಜಮ್ಮ	ಕೊಂಡವಾರಿಪಲ್ಲಿ
14	ಸಾಕಲ ಗಂಗಮ್ಮ	ಮಲ್ಲಪ್ಪ	ಗೊಂದಿಪಲ್ಲಿ
15	ವಿ. ಮಂಜುಳ	ಕೆ. ಶ್ರೀನಿವಾಸಲು	ರಾಮಸ್ವಾಮಿಪಲ್ಲಿ

ಬೇಲಿಕೇರಿ ಬಂದರು ಅಭಿವೃದ್ಧಿ

2316 (2799) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇಲಿಕೇರಿ ಬಂದರು ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆಗಳೇನು?

ಆ) ಈ ಯೋಜನೆಗೆ ಅನುಮತಿ ನೀಡಲು ಮತ್ತು ಕಾಮಗಾರಿ ಆರಂಭಿಸಲು ವಿಳಂಬವಾಗುತ್ತಿರಲು ಕಾರಣಗಳೇನು

ಇ) ಪ್ರಸ್ತಾವಿತ ಯೋಜನೆಯ ವಿಳಂಬದಿಂದ ಮೀನುಗಾರರಿಗೆ ಅಪಾರ ತೊಂದರೆ, ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು):

ಅ) ಬೇಲಿಕೇರಿ ಮೀನುಗಾರಿಕೆ ಇಳಿದಾಣವನ್ನು ರೂ. 67.40 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಭಾರತ ಸರ್ಕಾರವು ಹಾಗೂ ಕರ್ನಾಟಕ ಸರ್ಕಾರವು ಅನುಕ್ರಮವಾಗಿ ಆಗಸ್ಟ್ 1997 ಮತ್ತು ಮೇ 1998 ರಲ್ಲಿ ಮಂಜೂರಾತಿ ನೀಡಿರುತ್ತವೆ. ಈ ಯೋಜನೆಯಲ್ಲಿ 30 ಮೀ. ಜಟ್ಟಿ, 186 ಮೀ. ಉದ್ದದ ಗ್ರೆಯಾನ್ ಮತ್ತು ಹೊಳೆತ್ತುವಿಕೆ ಒಳಗೊಂಡಿವೆ. ಸದರಿ ಯೋಜನೆಯ ಮೂಲ ವಿನ್ಯಾಸವನ್ನು ಸ್ಥಳೀಯ ಅಗತ್ಯತೆಗಳಿಗೆ ನುಗುಣವಾಗಿ ಬದಲಾವಣೆ ಮಾಡಿ ರೂ. 141.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಫೆಬ್ರವರಿ 2001ರಲ್ಲಿ ಭಾರತ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ. ಈ ಯೋಜನೆಯಲ್ಲಿ 52 ಮೀ. ಉದ್ದದ ಜಟ್ಟಿ, ಹೊಳೆತ್ತುವಿಕೆ, 180 ಮೀ. ಉದ್ದದ ರಿವರ್ ಟ್ರೈನಿಂಗ್ ವಾಲ್ ಹಾಗೂ 210 ಮೀ. ಉದ್ದದ ಸಮುದ್ರತೀರದ ಸಂರಕ್ಷಣೆ ಕಾಮಗಾರಿಗಳು ಸೇರಿವೆ.

ಆ) ಭಾರತ ಸರ್ಕಾರದಿಂದ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆಯನ್ನು ನಿರೀಕ್ಷಿಸುವುದು ಅವಶ್ಯಕವಾಗಿದೆ.

ಇ) ಮೀನುಗಾರರು ಕೆಲವು ತೊಂದರೆಗಳನ್ನು ಅನುಭವಿಸಿದ್ದಾರೆ.

ಈ) ಶೀಘ್ರವಾಗಿ ಅನುಮೋದನೆಯನ್ನು ನೀಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ವಿಷಯ: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಬೆಳೆ ವಿಮೆ

2361 (2700) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ. (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಬೆಳೆ ವಿಮೆ ಮಾಡಿದ ರೈತರ ಸಂಖ್ಯೆ ಎಷ್ಟು; ಎಷ್ಟು ಪ್ರೀಮಿಯಂ ತುಂಬಿದ್ದರು; ಹಾಗೂ ರೈತರಿಗೆ ಎಷ್ಟು ಬೆಳೆ ವಿಮೆ ಕೊಡಲಾಗಿದೆ; ಯಾವ ಯಾವ ಬೆಳೆಗೆ ಎಷ್ಟು ಎಷ್ಟು ದರದ ಪ್ರಕಾರ ನೀಡಲಾಗಿದೆ;

ಆ) ಅಧಿಕಾರಿಗಳ ನಿರ್ಲಕ್ಷ್ಯತನದಿಂದಾಗಿ ರೈತರಿಗೆ ಹೆಚ್ಚಿನ ಬೆಳೆ ವಿಮೆ ಸಂದಾಯವಾಗದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ;

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ರೈತರು ತುಂಬಿದ ಪ್ರೀಮಿಯಂ ಹಣ ಎಷ್ಟು; ಹಾಗೂ ಎಷ್ಟು ಹಣ ಸಂದಾಯವಾಗಿರುವುದು;

ಉ) ಸದರಿ ತಾಲ್ಲೂಕುಗಳಲ್ಲಿ ಯಾವ ಯಾವ ಬೆಳೆಗೆ ಎಷ್ಟು ಹಣವನ್ನು ಯಾವ ಯಾವ ದರದ ಪ್ರಕಾರ ನೀಡಲಾಗಿದೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) 2002ರ ಮುಂಗಾರು ಹಂಗಾಮಿನಲ್ಲಿ 92,416 ರೈತರು ರೂ. 4.99 ಕೋಟಿ ವಿಮಾ ಕಂತನ್ನು ಪಾವತಿಸಿ ಬೆಳೆ ವಿಮಾ ಯೋಜನೆಯಲ್ಲಿ ಪಾಲ್ಗೊಂಡಿರುತ್ತಾರೆ. ಭಾರತೀಯ ಸಾಮಾನ್ಯ ವಿಮಾ ನಿಗಮವು ಬೆಳಗಾವಿ ಜಿಲ್ಲೆಯಲ್ಲಿ ರೈತರಿಗೆ ನೀಡಬೇಕಾಗಿರುವ ಬೆಳೆ ನಷ್ಟ ಪರಿಹಾರ ಕ್ರೋಢೀಕರಿಸುತ್ತಿದೆ. ಇದನ್ನು ಇನ್ನು ಕೆಲವೇ ದಿನಗಳಲ್ಲಿ ವಿತರಿಸಲಾಗುವುದು.

ಬೆಳೆವಾರು ನೀಡುವ ವಿಮೆಯ ದರದ ವಿವರಗಳು ಬೆಳೆಗಳಿಗೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಇರುವುದಿಲ್ಲ. ಪ್ರತಿ ಬೆಳೆಗೆ ನೀಡುವ ಬೆಳೆ ನಷ್ಟ ಪರಿಹಾರ ಆ ಬೆಳೆಯ ಪ್ರಾರಂಭಿಕ ಇಳುವರಿ ಹಾಗೂ ವಾಸ್ತವಿಕ ಇಳುವರಿ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ ವ್ಯತ್ಯಾಸದ ಇಳುವರಿಗೆ ಆ ಕ್ಷೇತ್ರದ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆ ವಿಮೆ ನಷ್ಟ ಪರಿಹಾರ ದೊರೆಯುತ್ತದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ 2002ರ ಮುಂಗಾರು ಹಂಗಾಮಿನಲ್ಲಿ ಕ್ರಮವಾಗಿ ರೂ. 94,21,501 ಮತ್ತು ರೂ. 75,31,767 ವಿಮಾ ಕಂತನ್ನು ಪಾವತಿಸಿರುತ್ತಾರೆ. ಬೆಳೆ ನಷ್ಟ ಪರಿಹಾರವನ್ನು ಇಷ್ಟರಲ್ಲೇ ವಿತರಿಸಲಾಗುವುದು.

ಉ) ಬೆಳೆವಾರು ನೀಡುವ ವಿಮೆಯ ದರದ ವಿವರಗಳು ಬೆಳೆಗಳಿಗೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಇರುವುದಿಲ್ಲ. ಪ್ರತಿ ಬೆಳೆಗೆ ನೀಡುವ ಬೆಳೆ ನಷ್ಟ ಪರಿಹಾರ ಆ ಬೆಳೆಯ ಪ್ರಾರಂಭಿಕ ಇಳುವರಿ ಹಾಗೂ ವಾಸ್ತವಿಕ ಇಳುವರಿಯನ್ನು ಅವಲಂಬಿತವಾಗಿರುತ್ತದೆ. ವಾಸ್ತವಿಕ ಇಳುವರಿ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ ವ್ಯತ್ಯಾಸದ ಇಳುವರಿಗೆ ಆ ಕ್ಷೇತ್ರದ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆ ವಿಮೆ ನಷ್ಟ ಪರಿಹಾರ ದೊರೆಯುತ್ತದೆ.

ಕರಾವಳಿ ಜಿಲ್ಲೆಗಳಲ್ಲಿ ಕಡಲ ಕೊರೆತ

2317 (2796) : ಶ್ರೀ ಯೋಗೀಶ್ ಭಟ್. ಎನ್ (ಮಂಗಳೂರು) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?